

ಚಂದ್ರಿಕಾ ಹೆಗಡೆ

ಕಲೆ: ಸಂತೋಷ್ ಸಸಿಹಿತ್ಲು



# ಆನೆ ಮರಿ ಇರುವೆ ಮರಿ

ಆನೆ ಮರಿ ಆನೆ ಮರಿ
ಬಂತು ನೋಡು ಆನೆ ಮರಿ

ದಪ್ಪ ದಪ್ಪ ಹೆಜ್ಜೆ ಇಟ್ಟು
ಉದ್ದ ಸೊಂಡಿಲಾಡಿಸಿ
ಪುಟ್ಟ ಪುಟ್ಟ ಕಣ್ಣು ಬಿಟ್ಟು
ಮೋಟು ಬಾಲ ಝಾಡಿಸಿ

ಆನೆ ಮರಿ ಆನೆ ಮರಿ
ತಿನ್ನಲೇನು ಬೇಕು ನಿನಗೆ?
ಎಳೆಯ ಕಬ್ಬು ಒಂದು ಹೊರೆ
ಜೊತೆಗೆ ಮೂಟೆ ಸಕ್ಕರೆ!

ಇರುವೆ ಮರಿ ಇರುವೆ ಮರಿ
ಬಂತು ನೋಡು ಇರುವೆ ಮರಿ
ಚಿಕ್ಕ ಚಿಕ್ಕ ಕಾಲು
ಅಕ್ಕಪಕ್ಕ ಉದ್ದ ಸಾಲು

ಎಲ್ಲಿ ಇದರ ಕಣ್ಣು ಮೂಗು
ಹುಡುಕಿ ಹುಡುಕಿ ಸೋಲು!
ಇರುವೆ ಮರಿ ಇರುವೆ ಮರಿ

ತಿನ್ನಲೇನು ಬೇಕು ನಿನಗೆ?
ಒಂದು ಹನಿ ಬೆಲ್ಲ ಸಾಕು
ಜೊತೆಗೆ ಒಂದು ಅಕ್ಕಿಕಾಳು!

